ಅಧ್ಯಕ್ಷರು : ಇದರ ಬಗ್ಗೆ ಬಹಳ ಚರ್ಚೆ ಬೇಡ, ಸಾಕು. ತಮ್ಮ ಸಲಹೆ ಸೂಕ್ತವಾಗಿದೆ, ಎಲ್ಲರೂ ಅದನ್ನು ಗಮನದಲ್ಲಿಟ್ಟುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು ವಿನಂತಿ ಮಾಡಬಾರದು, ಆದೇಶ ಮಾಡಬೇಕಾಗುತ್ತದೆ. you have to order, not request.

ಅಧ್ಯಕ್ಷರು : ಆಯಿತು.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ರಾಯರೆಡ್ಡಿಯವರು ಎಷ್ಟು ಒಳ್ಳೆಯ ಮಾತನ್ನು ಹೇಳಿದರು, ಅವರಿಗೆ ಏನಾದರೂ ಒಂದು ಒಳ್ಳೆಯ ಅವಕಾಶ ಕೊಡಿಸಿ.

ಅಧ್ಯಕ್ಷರು : ಈಗ ಸಂತಾಪ ಸೂಚನೆ.

ಅಧ್ಯಕ್ಷರು : (ಮಾನ್ಯ ಅಧ್ಯಕ್ಷರು ಮಂಡಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದ ನಂತರ ಈ ಸದನದ ಮತ್ತು ಮೇಲ್ಮನೆಯ ಸದಸ್ಯರಾಗಿದ್ದಂಥ ಅನೇಕ ಜನ ಮಾನ್ಯ ಸದಸ್ಯರು ದಿವಂಗತರಾಗಿದ್ದಾರೆ. ಅವರ ಜ್ಞಾಪಕಾರ್ಥವಾಗಿ, ಅವರನ್ನು ಸ್ಮರಣೆ ಮಾಡಿಕೊಳ್ಳಲಿಕ್ಕೋಸ್ಕರ, ಅವರ ಆತ್ಮಕ್ಕೆ ಶಾಂತಿ ಕೋರಲಿಕ್ಕೋಸ್ಕರವಾಗಿ ತಾವು ಈ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ. ನಾನು ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ.

ಮೊದಲನೆಯದಾಗಿ, ಎಸ್.ಮಲ್ಲಿಕಾರ್ಜುನಯ್ಯನವರು. ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಜನಿಸಿದಂಥವರು. ಇವರು ಬಹಳ ದೀರ್ಘಕಾಲ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ಒಬ್ಬ ನಾಯಕರು. ಇವರು ಮೂರು ಬಾರಿ ವಿಧಾನ ಪರಿಷತ್ತಿಗೆ ಮತ್ತು ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ಮಲ್ಲಿಕಾರ್ಜುನಯ್ಯನವರು ತುರ್ತು ಪರಿಸ್ಥಿತಿಯನ್ನು ವಿರೋಧ ಮಾಡಿ ಸುಮಾರು ಹದಿನೆಂಟು ತಿಂಗಳ ಕಾಲ ಜೈಲುವಾಸವನ್ನು ಕೂಡ ಅನುಭವಿಸಿದ್ದರು. ಇವರು ಬೆಂಗಳೂರು ಜೈಲಿನಲ್ಲಿದ್ದರು. ಅವರು ಬಹಳ ಸಜ್ಜನರು. ವೃತ್ತಿಯಲ್ಲಿ ವಕೀಲಾಗಿದ್ದರು, ಕೃಷಿಕರಾಗಿದ್ದರು. ಬಹಳ ಸರಳ ಮತ್ತು ಸಜ್ಜನಿಕೆಯ ಒಬ್ಬ ರಾಜಕಾರಣಿಯಾಗಿದ್ದಂಥವರನ್ನು ಇವರತ್ತು ನಾವೆಲ್ಲರೂ ಕೂಡ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅಂಥ ಸಜ್ಜನರ ರಾಜಕಾರಣಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಸಾವಿಗೆ ನಾನು ಸಂತಾಪವನ್ನು ವ್ಯಕ್ತ ಮಾಡಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಮಲ್ಲಿಕಾರ್ಜುನಯ್ಯನವರ ಸಾವಿನಿಂದ ನಾವು ಕರ್ನಾಟಕಕ್ಕೆ ಒಬ್ಬ ಸಜ್ಜನ ರಾಜಕಾರಣಿಯನ್ನು, ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ ಎಂದು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತೇನೆ.

ಇನ್ನು, ಕೆ.ಪ್ರಭಾಕರ ರೆಡ್ಡಿಯವರೂ ಕೂಡ ಇತ್ತೀಚೆಗೆ ನಿಧನರಾಗಿದ್ದಾರೆ. ಒಮ್ಮೆ ಇವರು ವಿಧಾನಸಭೇಗೆ ಉಪ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು. ಇವರು ಕನ್ನಡ ಹೋರಾಟಗಾರರು. ಬಹಳ ದೀರ್ಘಕಾಲ ಕನ್ನಡ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಮತ್ತು ಹಲವಾರು ಟ್ರೇಡ್ ಯೂನಿಯನ್‌ಗಳಲ್ಲಿ ಕೂಡ ಕೆಲಸ ಮಾಡುತ್ತಿದ್ದರು. ಕನ್ನಡ ನೆಲ, ಜಲ, ಭಾಷೆ, ಸಂಸ್ಕೃತಿಗೋಸ್ಕರ ನಿರಂತರವಾಗಿ ಹೋರಾಟ ಮಾಡುತ್ತಿದ್ದಂಥವರು ಪ್ರಭಾಕರ ರೆಡ್ಡಿಯವರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಕೂಡ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು, ಹೆಚ್.ಎಸ್. ಶಂಕರಲಿಂಗೇಗೌಡರು ಮಂಡ್ಯ ಜಿಲ್ಲೆಯವರು. ಇವರು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಮೈಸೂರಿನಲ್ಲೇ ರಾಜಕಾರಣವನ್ನು ಪ್ರಾರಂಭ ಮಾಡಿದರು. ಮೈಸೂರು ನಗರ ಪಾಲಿಕೆಯ ಸದಸ್ಯರಾಗಿದ್ದರು. ನಂತರ ನಗರಪಾಲಿಕೆಯಲ್ಲಿ ಮೇಯರ್‌ಆಗಿ ಕೂಡ ಕೆಲಸ ಮಾಡಿದ್ದರು. ಅದಾದ ನಂತರ ನಾಲ್ಕು ಬಾರಿ ಸತತವಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಶಂಕರಲಿಂಗೇಗೌಡರ ವಿಶೇಷವಾದಂಥ ಗುಣವೆಂದರೆ ಅವರು ಬಹಳ ನೇರವಾಗಿ ಮಾತನಾಡುತ್ತಿದ್ದರು. ಅವರದೇ ಆದಂಥ ಮಹಾಭಾರತ ಮತ್ತು ರಾಮಾಯಣ ಶ್ಲೋಕಗಳನ್ನು ನಿರ್ಮಾಣ ಮಾಡಿಕೊಂಡುಬಿಟ್ಟಿದ್ದರು. ಯಾವುದೇ ಸಭೆ–ಸಮಾರಂಭಗಳಿರಲಿ, ಅಲ್ಲಿ ಅವರು ತಪ್ಪದೇ ಅವುಗಳನ್ನು ಹೇಳುತ್ತಿದ್ದರು. ಅವರಿಗೆ ಜನಪರವಾದಂಥ ಕಾಳಜಿಯಿತ್ತು. ಅವರು ಶಾಸಕರಾಗಿ ಜನಪರವಾಗಿ ಬಹಳಷ್ಟು ಹೋರಾಟಗಳನ್ನು ಮಾಡುತ್ತಿದ್ದರು ಮತ್ತು ಇವರು ಬಹಳ ಜನಪ್ರಿಯ ಶಾಸಕರಾಗಿದ್ದರು. ಆ ಕಾರಣದಿಂದಲೇ ಅವರು ಸತತವಾಗಿ ನಾಲ್ಕು ಬಾರಿ ಗೆದ್ದು, ಜನರ ವಿಶ್ವಾಸವನ್ನು ಗೊಳಿಸಿಕೊಂಡಿದ್ದರು. ಮತ್ತು ಅವರು ಬಹಳ ವೇಗವಾಗಿ ಮಾತನಾಡುವುದನ್ನು ಹವ್ಯಾಸ ಮಾಡಿಕೊಂಡುಬಿಟ್ಟಿದ್ದರು. ಅನೇಕ ಸಾರಿ ಅವರ ಮಾತು ಯಾರಿಗೂ ಅರ್ಥವಾಗುತ್ತಿರಲ್ಲಿಲ್ಲ, ಆ ರೀತಿ ವೇಗವಾಗಿ ಮಾತನಾಡುತ್ತಿದ್ದರು. ಶಂಕರಲಿಂಗೇಗೌಡರಿಗೆ ಒಂದು ಕೊರಗು ಏನಿತ್ತು ಎಂದರೆ, ನಾಲ್ಕು ಬಾರಿ ಗೆದ್ದರೂ ಕೂಡ ಮಂತ್ರಿಯಾಗಲಿಲ್ಲ ಎನ್ನುವ ಕೊರಗಿತ್ತು. ಬಿಜೆಪಿ ಸರ್ಕಾರದಲ್ಲಿ ತಮ್ಮನ್ನು ಮಂತ್ರಿ ಮಾಡಲಿಲ್ಲ ಎನ್ನುವ ಕೊರಗು ಅವರಿಗಿತ್ತು. ಏಕೆಂದರೆ, ಅವರು ನಾಲ್ಕು ಬಾರಿಯೂ ಬಿಜೆಪಿಯ ಶಾಸಕರಾಗಿದ್ದರು. ಇದನ್ನು ಅವರು ಅನೇಕ ಸಾರಿ ವಿಧಾನಸಭೆಯೊಳಗೇ ಪ್ರಸ್ತಾಪ ಮಾಡಿದ್ದರು. ನಾಲ್ಕು ಬಾರಿ ಗೆದ್ದರೂ ಮಂತ್ರಿಯಾಗಲಿಲ್ಲ ಎನ್ನುವ ಒಂದು ನೋವು ಅವರಿಗೆ ಬಹಳವಾಗಿ ಇತ್ತು. ಆ ನೋವಿನಿಂದಲೇ ಅವರು ತಮ್ಮ ಕೊನೆಯ ದಿನಗಳಲ್ಲಿ ಕೂಡ ಬಹಳ ನೊಂದುಕೊಂಡಿದ್ದರು.

ಶ್ರೀ ಸಿ.ಟಿ.ರವಿ : ನಾಲ್ಕು ಸಲ ಗೆದ್ದವರು ನಿಮ್ಮಲ್ಲಿಯೂ ಅನೇಕ ಜನರಿದ್ದಾರೆ. ಅದೇ ಕೊರಗಿನಲ್ಲಿ ಅವರೂ ಹಾಗೆ ಆಗಬಾರದು.

ಶ್ರೀ ಸಿದ್ಧರಾಮಯ್ಯ : ನಾನು ಸತ್ತುಹೋಗಿರುವವರ ಬಗ್ಗೆ ಹೇಳುತ್ತಿದ್ದರೆ, ನೀವು ಬದುಕಿರುವವರ ಬಗ್ಗೆ ಹೇಳುವುದಕ್ಕೆ ಹೋಗುತ್ತಿದ್ದೀರಲ್ಲ. ಇದೇನು ರಾಜಕೀಯವೇ ?

ಶ್ರೀ ಸಿ.ಟಿ.ರವಿ: ಅದನ್ನು ಸರಿ ಮಾಡುವುದಕ್ಕೆ ನಿಮಗೆ ಅವಕಾಶವಿದೆ. ನಾಳೆ ಅವರೂ ಹಾಗಿ ಆಗಿ ಬಿಡಬಾರದು, ಅದೇ ಕೊರಗು ಅವರಿಗೂ ಬರಬಾರದು ಎನ್ನುವುದು ನಮ್ಮ ಕಳಕಳಿಯಷ್ಟೇ.

ಶ್ರೀ ಸಿದ್ದರಾಮಯ್ಯ : Is it not a fact ? ಅವರು ಮಂತ್ರಿಯಾಗಲಿಲ್ಲ ಎನ್ನುವುದು ಸತ್ಯವೋ, ಸುಳ್ಳೋ ? ಅದನ್ನು ಹೇಳಿದರೆ, ರವಿಯವರೇ ನೀವು ಏಕೆ ಹೀಗೆ ಮಾತನಾಡುತ್ತೀರಿ ? ಇಲ್ಲೂ ಅಂಥವರು ಇದ್ದಾರೆ. ಅವರು ಮಂತ್ರಿಯಾಗುವುದಕ್ಕೆ ಇನ್ನೂ ಅವಕಾಶವಿದೆ. ಆದರೆ ಅವರು ಮಂತ್ರಿಯಾಗದೇ ಸತ್ತು ಹೋದರು ಎನ್ನುವುದು ವಿಷಯ. ಎಲ್ಲರೂ ಮಂತ್ರಿಯಾಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಮಂತ್ರಿಯಾಗತಕ್ಕಂಥ ಎಲ್ಲ ಯೋಗ್ಯತೆ ಶಂಕರಲಿಂಗೇಗೌಡರಿಗೆ ಇತ್ತು. ಅವರು ಅದನ್ನು ಬಹಿರಂಗವಾಗಿ ತೋಡಿಕೊಂಡಿದ್ದರು. ಅನೇಕ ಸಾರಿ ಬಹಳ ದುಃಖದಿಂದ ಅದನ್ನು ಪ್ರಸ್ತಾಪ ಮಾಡಿದ್ದರು. ಮಾಧ್ಯಮಗಳ ಮುಂದೆ ಮಾಡಿದ್ದರು. ವಿಧಾನಸಭೆಯಲ್ಲಿ ಮಾಡಿದ್ದರು. ಎಲ್ಲೆಲ್ಲಿ ಅವಕಾಶ ಸಿಗುತ್ತದೋ ಆ ಎಲ್ಲ ವೇದಿಕೆಗಳಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದರು. ನಾನು ಅದನ್ನು ಹೇಳಿದ್ದೇನೇ ಹೊರತು, ಬಿಜೆಪಿಯವರು ಅವರಿಗೆ ಅನ್ಯಾಯ ಮಾಡಿದರು ಎಂದು ಹೇಳಿದ್ದೆನೇ ? ಅದನ್ನು ಏಕೆ ಪ್ರಸ್ತಾಪ ಮಾಡುತ್ತೀರಿ ? ಅದನ್ನು ನಾನು ಏನೂ ಹೇಳಲಿಕ್ಕೆ ಹೋಗಲಿಲ್ಲ. ಬಿಜೆಪಿ ಎಂಎಲ್‌ಎ ಆಗಿದ್ದರು, ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿಲ್ಲ ಎನ್ನುವ ನೋವು ಅವರಿಗೆ ಇತ್ತು ಎಂದು ಅಷ್ಟೇ ನಾನು ಹೇಳಿರುವುದು. It is a fact ಅದು ನಾನು ಹೇಳಿದ್ದು ಅಲ್ಲ, ಬಹಿರಂಗವಾಗಿ ಎಲ್ಲ ಕಡೆ ಹೇಳಿಕೊಂಡಿದ್ದರು. ಅವರು ನನಗೆ ವೈಯಕ್ತಿಕವಾಗಿ ಒಳ್ಳೆಯ ಸ್ನೇಹಿತರು. ಹೆಚ್ಚು ಕಡಿಮೆ ನನಗೂ ಅವರಿಗೂ ಒಂದೇ ವಯಸ್ಸಿತ್ತು. ಹಾಗಾಗಿ, ವೈಯಕ್ತಿಕವಾಗಿ ಸ್ನೇಹಿತರಾಗಿದ್ದೆವು. ಹೀಗಾಗಿ, ಒಳ್ಳೆಯ ಸ್ನೇಹಿತನನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವಂಥದ್ದು ಬಹಳ ನೋವಿದೆ. ನನಗೆ ವೈಯಕ್ತಿಕವಾಗಿ ನೋವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎ.ಕೃಷ್ಣಪ್ಪನವರು ಈ ಸದನದಲ್ಲಿ ಶಾಸಕರಾಗಿದ್ದವರು. ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದವರು. ಅವರೂ ಕೂಡ ನಮ್ಮನ್ನಗಲಿದ್ದಾರೆ. ಅವರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನವರು. ಅಲ್ಲಿಂದ ಬೆಂಗಳೂರಿಗೆ ಬಂದು ಬೆಂಗಳೂರಿನಲ್ಲಿ ITI ನಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿದ್ದರು.

ಕಾರ್ಮಿಕ ನಾಯಕರಾಗಿ ಕೆಲಸ ಮಾಡಿ, ರಾಜಕಾರಣಕ್ಕೆ ಪ್ರವೇಶ ರಾಜಕಾರಣದಲ್ಲಿ ಎತ್ತರಕ್ಕೆ ಬೆಳೆದವರು. ಇಂದಿಗೂ ಸಾಮಾಜಿಕ ನ್ಯಾಯದ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡು ಕೆಲಸ ಮಾಡಿದ್ದವರು. ಅವರು ಹಿಂದುಳಿದ ಜಾತಿಗೆ ಸೇರಿದವರಾಗಿ ಸಾಮಾಜಿಕ ನ್ಯಾಯದ ಬಗ್ಗೆ ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡಿದವರು. ಅವರು ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಚುನಾವಣೆ ಮಧ್ಯದಲ್ಲಿ ಚುನಾವಣಾ ಫಲಿತಾಂಶ ಬರುವುದಕ್ಕಿಂತ ಮುಂಚಿತವಾಗಿಯೇ ಕಾಲವಾಗಿ ಹೋದರು. Assembly, Parliament ಚುನಾವಣೆಗೂ ಸ್ಪರ್ಧಿಸಿದ್ದರು. ಚುನಾವಣಾ ಫಲಿತಾಂಶ ಬರುವುದಕ್ಕಿಂತ ಮುಂಚಿತವಾಗಿ ಕಾಲವಾದರು. ಎ. ಕೃಷ್ಣಪ್ಪನವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಐ.ಎಂ. ಜಯರಾಮಶೆಟ್ಟಿರವರು ಕುಂದಾಪುರದ ಮೂಡ್ಲಕಟ್ಟೆಯಲ್ಲಿ ಜನಿಸಿದ್ದರು. ಬಿ.ಇ., ಪದವೀಧರರಾಗಿದ್ದರು, ಜೊತೆಗೆ, ವೃತ್ತಿಯಲ್ಲಿ ಕೈಗಾರಿಕೋದ್ಯಮಿ ಕೂಡ ಆಗಿದ್ದರು. ಅವರು ಸಮಾಜ ಸೇವಕರಾಗಿ ಕೆಲಸ ಮಾಡುತ್ತಿದ್ದರು. ಅವರೂ ಕೂಡ ನಮ್ಮನ್ನಗಲಿದ್ದಾರೆ. 1994ರಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಅವರು ಆಯ್ಕೆಯಾಗಿದ್ದರು. 1998ರಲ್ಲಿ ಲೋಕಸಭೆಗೆ ಕೂಡ ಆಯ್ಕೆಯಾಗಿದ್ದರು. ಇವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ಸ್ಥಾಪನೆ ಮಾಡಿ ಆ ಶಿಕ್ಷಣ ಸಂಸ್ಥೆಗಳನ್ನು ಬೆಳೆಸತಕ್ಕ ಕೆಲಸ ಮಾಡಿದ್ದರು. ಹಾಗಾಗಿ, ಅವರು ಕೃಷಿಕರಾಗಿ, ರಾಜಕಾರಣಿಯಾಗಿ, ವಿದ್ಯಾ ಸಂಸ್ಥೆಗಳನ್ನು ಕಟ್ಟಿ ಬೆಳೆಸತಕ್ಕಂಥ ಕೆಲಸ ಮಾಡಿದ್ದರು. ಹೀಗೆ ಹತ್ತಾರು ಸಮಾಜ ಸೇವೆಗಳನ್ನು ಮಾಡುತ್ತಿದ್ದರು. ಕೈಗಾರಿಕೋದ್ಯಮಿಯಾಗಿದ್ದರು. ಅವರೂ ಕೂಡ ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಪ್ರಾರ್ಥನೆ ಮಾಡುತ್ತೇನೆ.

ಗೋಪಿನಾಥ್ ಪಿ. ಮುಂಡೆಯವರು ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದವರು. ಅವರು 5 ಬಾರಿ ಶಾಸಕರಾಗಿದ್ದರು. ಜೊತೆಗೆ, ಮಹಾರಾಷ್ಟ್ರ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಕೂಡ ಕೆಲಸ ಮಾಡಿದ್ದರು. ಅವರು ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದರು. ಆಮೇಲೆ, ಲೋಕಸಭೆಗೆ ಕೂಡ ಆಯ್ಕೆಯಾಗಿದ್ದರು. ಬಹಳ ದುರಂತವೇನೆಂದರೆ, ಮಂತ್ರಿಯಾದ ಒಂದೇ ವಾರದಲ್ಲಿ ಅವರು ಕಾಲವಾದರು. ಕೇಂದ್ರದಲ್ಲಿ ಸನ್ಮಾನ್ಯ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಮಹಾರಾಷ್ಟ್ರಕ್ಕೆ ಹೋಗಬೇಕೆಂದು Airport ಗೆ ಹೋಗುವಾಗ accident ಆಗಿ ಅವರು ಆ accident ನಲ್ಲಿ ಆಘಾತ ಅನುಭವಿಸಿ, heart attack ಆಗಿ ಅವರು ಕಾಲವಾದರು. ಅವರು ಮಹಾರಾಷ್ಟ್ರದಲ್ಲಿ ಒಬ್ಬ ಒಳ್ಳೆಯ ನಾಯಕರು. ಮುಂದೆ ಅವರಿಗೆ ಇನ್ನೂ ಒಳ್ಳೆಯ ಭವಿಷ್ಯವಿತ್ತು. ಮಹಾರಾಷ್ಟ್ರ ರಾಜಕಾರಣದಲ್ಲಿ ಅವರಿಗೆ ಒಳ್ಳೆಯ ಭವಿಷ್ಯವಿತ್ತು. ಅವರು ಕೆಳವರ್ಗದಿಂದ ಬಂದಂಥವರು. ಬಂಜಾರ community ಗೆ ಸೇರಿದಂಥವರು. ಬಂಜಾರ community ಯಿಂದ ಬಂದು

ಮಹಾರಾಷ್ಟ್ರ ರಾಜಕಾರಣದಲ್ಲಿ ಒಳ್ಳೆಯ ನಾಯಕರು ಎನ್ನುವುದನ್ನು ಸಾಬೀತು ಮಾಡಿದ್ದರು. ಅಂಥ ಗೋಪಿನಾಥ ಪಿ. ಮುಂಡೆಯವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎನ್.ಜನಾರ್ಧನ ರೆಡ್ಡಿಯವರು ಆಂಧ್ರ ಪ್ರದೇಶದವರು, ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥವರು. ಇವರು ಆಂಧ್ರ ಪ್ರದೇಶದ ವಿಧಾನಸಭೆ, ವಿಧಾನ ಪರಿಷತ್ ಮತ್ತು ದೇಶದ ಲೋಕಸಭೆ ಮತ್ತು ರಾಜ್ಯಸಭೆ ನಾಲ್ಕೂ ಕಡೆ ಕೆಲಸ ಮಾಡಿದಂಥ ಅನುಭವ ಇದ್ದಂಥವರು. ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಬಹಳಷ್ಟು ಸಮಾಜ ಸೇವೆಯನ್ನು ಮಾಡಿದಂಥವರು. ಅವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಸಿ.ಆರ್.ಸಿಂಹ ಒಬ್ಬ ಶ್ರೇಷ್ಠ ಕಲಾವಿದ. ರಂಗಭೂಮಿ ಮತ್ತು ಹವ್ಯಾಸಿ ನಾಟಕಗಳಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ಹವ್ಯಾಸಿ ರಂಗಭೂಮಿ ಹವ್ಯಾಸಿ ನಾಟಕದಲ್ಲಿ ಅವರು ಪಾತ್ರ ಮಾಡುತ್ತಿದ್ದರು. 6 ದಶಕಗಳು ಅಂದರೆ 60 ವರ್ಷಗಳ ಕಾಲ ಇವರು ಕಲಾಸೇವೆಯನ್ನು ಮಾಡಿದ್ದಾರೆ. ಕನ್ನಡದಲ್ಲಿ ಮಾತ್ರವಲ್ಲ, English ನಾಟಕಗಳಲ್ಲೂ ಕೂಡ ಅಭಿನಯಿಸಿದ್ದರು. ಸುಮಾರು 150 ಚಲನಚಿತ್ರಗಳಲ್ಲೂ ಸಹ ಅಭಿನಯಿಸಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ಸಿಕ್ಕಿವೆ. ಇದರ ಜೊತೆಗೆ ನಿರ್ದೇಶಕರಾಗಿಯೂ ಕೂಡ ಕೆಲಸ ಮಾಡಿದ್ದರು. ನಟ, ನಿರ್ದೇಶಕ, ಕಥೆ ಬರೆಯುವುದು, ಇವೆಲ್ಲವನ್ನೂ ಕೂಡ ರೂಪಿಸಿಕೊಂಡಿದ್ದರು. ಇತ್ತೀಚೆಗೆ ಕಿರುತೆರೆಯಲ್ಲೂ ಕೂಡ actಮಾಡಿ ಅವರು ಛಾಪನ್ನು ಮೂಡಿಸಿದ್ದರು. ಕರ್ನಾಟಕದಲ್ಲಿ ತಮ್ಮದೇ ಅದಂಥ ಅಭಿಮಾನಿಗಳನ್ನು ಅವರು ಪಡೆದುಕೊಂಡಿದ್ದರು ಎನ್ನುವುದನ್ನು ನಾವು ನೋಡುತ್ತೇವೆ. ಅಂಥ ಒಬ್ಬ ಶ್ರೇಷ್ಠ ನಟ, ರಂಗಭೂಮಿ ನಟ, ಚಲನಚಿತ್ರಗಳಲ್ಲಿ ಮಾಡುತ್ತಿದ್ದ ನಟ, ಕಿರುತೆರೆಯಲ್ಲಿ ಮಾಡುತ್ತಿದ್ದ ನಟ, ಅಂಥ ನಟ ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಡಾ: ಜಿ.ಎಸ್.ಪರಮಶಿವಯ್ಯನವರು ಬಿ.ಇ. ಪದವೀಧರರು. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದಂಥವರು. Superintendent Engineer ಆಗಿ ನಿವೃತ್ತಿ ಹೊಂದಿದವರು. ಇವರನ್ನು ನೀರಾವರಿ ತಜ್ಞ ಎಂದು ಎಲ್ಲರೂ ಕರೆಯುತ್ತಿದ್ದರು. ಡಾ: ಪರಮಶಿವಯ್ಯನವರು ಬಯಲುಸೀಮೆಯ ಜಿಲ್ಲೆಗಳಿಗೆ ನೀರು ಬರಬೇಕೆಂದು ಒಂದು ತಾಂತ್ರಿಕ ವರದಿಯನ್ನು ಕೂಡ ಸಿದ್ದ ಮಾಡಿದ್ದರು. ಅದಕ್ಕೆ ಪರಮಶಿವಯ್ಯ ವರದಿ ಎಂದೇ ಹೆಸರಾಗಿತ್ತು. ಅವರು ಅವರ ಬದುಕಿನ ಕೊನೇ ಕ್ಷಣದವರೆಗೂ ಕೂಡ ನೀರಾವರಿ ಬಗ್ಗೆ ಹೋರಾಟ ಮಾಡುತ್ತಿದ್ದರು, ಬಹಳ ಕ್ರಿಯಾಶೀಲರಾಗಿದ್ದಂಥ ನೀರಾವರಿ ತಜ್ಞ, ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೂಡ ದೊರಕಿತ್ತು. ಇತ್ತೀಚಿನರೆಗೂ ಕೂಡ ಅವರು ನೀರಾವರಿ ಬಗ್ಗೆ ಸದಾ ಚಿಂತನೆ ಮಾಡುತ್ತಿದ್ದರು. ಅವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಯಶವಂತ ವಿಠೋಬ ಚಿತ್ತಾಲ ಇವರು ಉತ್ತರ ಕನ್ನಡ ಜಿಲ್ಲೆಯವರು. ಕುಮಟಾ ತಾಲ್ಲೂಕಿನವರು. ಎಂ.ಎ. ಪದವೀಧರರಾಗಿದ್ದರು. ಚಿತ್ರಕಲೆಯಲ್ಲಿ ಅಪಾರವಾದ ಆಸಕ್ತಿಯನ್ನು ಹೊಂದಿದ್ದರು. ಜೊತೆಗೆ, ಸಾಹಿತಿಯಾಗಿದ್ದರು. ಕನ್ನಡ ಭಾಷೆಗೆ ಅಪಾರವಾದ ಕೆಲಸವನ್ನು ಅವರು ಮಾಡಿದ್ದವರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಒಂದು ಆಧುನಿಕ ಸ್ಪರ್ಶವನ್ನು ನೀಡಿದಂಥ ಖ್ಯಾತ ಕವಿ ಎಂದೇ ಅವರು ಪ್ರಸಿದ್ಧರಾಗಿದ್ದರು. ಅನೇಕ ಕಥಾ ಸಂಕಲನಗಳು, ಕಾದಂಬರಿಗಳು, ವಿಮರ್ಶೆಗಳನ್ನು ಕೂಡ ಅವರು ರಚನೆ ಮಾಡಿದ್ದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ದೊರಕಿತ್ತು. ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ, ಶಿವರಾಮ ಕಾರಂತ, ಇನ್ನಿತರ ಪ್ರಶಸ್ತಿಗಳು ಕೂಡ ಇವರಿಗೆ ಸಿಕ್ಕಿದ್ದವು. ಅಂಥ ಒಬ್ಬ ಉದ್ದಾಮ ಸಾಹಿತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಹಾಗೆಯೇ, ವಿ.ಕೆ.ಮೂರ್ತಿಯವರು ಮೈಸೂರಿನವರು, ಕನ್ನಡಿಗರು. ಇವರು ಮೈಸೂರಿನಲ್ಲಿ ಜನಿಸಿ, ಬೆಂಗಳೂರಿನ ಜಯಚಾಮರಾಜೇಂದ್ರ Polytechnic ನಲ್ಲಿ Cinematography diploma ಪಡೆದುಕೊಂಡಿದ್ದರು. ಇವರು ಹೆಚ್ಚಾಗಿ ಕೆಲಸ ಮಾಡಿದ್ದು ಹಿಂದಿ ಚಿತ್ರಗಳಲ್ಲಿ. ಒಬ್ಬ ಕನ್ನಡದವರಾಗಿ ಛಾಯಾಗ್ರಹಣದಲ್ಲಿ ಹೆಚ್ಚು ಸುದ್ದಿ, ಸದ್ದು ಮಾಡಿದ್ದು ಹಿಂದಿ ಚಿತ್ರ ಜಗತ್ತಿನಲ್ಲಿ. ಅದಕ್ಕೆ ಇವರನ್ನು ಮಾಂತ್ರಿಕ ಛಾಯಾಗ್ರಾಹಕ ಎಂದು ಕರೆಯುತ್ತಿದ್ದರು. ಅವರಿಗೆ 1959, 1962ರಲ್ಲಿ Film Fare ಪ್ರಶಸ್ತಿ ಸಿಕ್ಕಿತ್ತು. 2005ರಲ್ಲಿ International Indian Film Academy, ಜೀವಮಾನದ ಶ್ರೇಷ್ಠ ಸಾಧನೆ ಪ್ರಶಸ್ತಿ, ಎಲ್ಲಕ್ಕಿಂತ ಬಹಳ ಮುಖ್ಯವಾಗಿ 2008ರಲ್ಲಿ ದಾದಾ ಸಾಹೇಬ್ ಫಾಲ್ಕೆಯಂಥ ಶ್ರೇಷ್ಠ ಪ್ರಶಸ್ತಿ ಕೂಡ ಇವರಿಗೆ ಬಂದಿತ್ತು. ಅಂದರೆ, ಇವರಿಗೆ ಬಂದಿರುವ ಪ್ರಶಸ್ತಿಗಳನ್ನೆಲ್ಲ ನೋಡಿದಾಗ ಇವರು ಬಹಳ ಎತ್ತರಕ್ಕೆ ಬೆಳೆದಂಥ ಛಾಯಾಗ್ರಾಹಕರಾಗಿದ್ದರು ಎನ್ನುವಂಥದ್ದು ಗೊತ್ತಾಗುತ್ತದೆ. ಎಲ್ಲಕ್ಕಿಂತ ಅಭಿಮಾನ ಏನೆಂದರೆ, ಇವರು ಕನ್ನಡಿಗರಾಗಿ ಎಷ್ಟು ಎತ್ತರಕ್ಕೆ ಛಾಯಾಗ್ರಾಹಣ ಕ್ಷೇತ್ರದಲ್ಲಿ, ಚಿತ್ರ ಜಗತ್ತಿನಲ್ಲಿ ಬೆಳೆದಿದ್ದರು. ಇವರಿಗೆ ಸಂತಾಪವನ್ನು ವ್ಯಕ್ತ ಮಾಡಿ ಇವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ. ಇವತ್ತು ನೀವು ತಂದಿರಕ್ಕಂಥ ಸಂತಾಪ ಸೂಚನೆಯಲ್ಲಿರುವ ಈ ಎಲ್ಲಾ ಮಹನೀಯರಿಗೆ, ದಿವಂಗತರ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖ ಭರಿಸುವ ಶಕ್ತಿ ಕೊಡಲೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಕೆಲವರು ಹಿರಿಯ ಮಹನೀಯರು ನಮ್ಮನ್ನೇನು ಅಗಲಿದ್ದಾರೆ, ಅವರ ಬಗ್ಗೆ ತಾವೇನು ಒಂದು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ ಅದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಎಸ್. ಮಲ್ಲಿಕಾರ್ಜುನಯ್ಯನವರು ತುಮಕೂರು ಭಾಗದಿಂದ ಪದವೀಧರ ಕ್ಷೇತ್ರದಿಂದ 3 ಬಾರಿ ಆಯ್ಕೆಯಾಗಿದ್ದರು. ಬಹಳ ಪ್ರಮುಖವಾಗಿ ಎಂದರೆ, ಜನಸಂಘದ ಪಕ್ಷ ಇದ್ದಂಥ ಸಂದರ್ಭದಲ್ಲಿ

ಅವತ್ತು ಅವರು ಪದವೀಧರ ಕ್ಷೇತ್ರದಿಂದ 3 ಬಾರಿ ಆಯ್ಕೆಯಾಗಿದ್ದರು. ಅವರು ಜನಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಭಾರತೀಯ ಜನತಾ ಪಾರ್ಟಿ ಅವರ ಮೂಲ ಪಾರ್ಟಿ ಆ ಸಂಘಟನೆ ಮತ್ತು ನಮ್ಮ ಕಾರ್ಯಕರ್ತರ ಜೊತೆ ಒಂದು ಒಳ್ಳೆಯ ರೀತಿಯಾದ ಸಂಬಂಧ ಇಟ್ಟುಕೊಂಡು, ಅವರನ್ನು ಸಂಘಟನೆಗೆ ಹುರಿದುಂಬಿಸುವ ಕೆಲಸವನ್ನು ಮಲ್ಲಿಕಾರ್ಜುನಯ್ಯನವರು ಯಾವಾಗಲೂ ಮಾಡಿದ್ದನ್ನು ನಾವು ನೋಡಿದ್ದೇವೆ. ಬಹಳ ಸರಳ, ಸಜ್ಜನ ವ್ಯಕ್ತಿಯಾಗಿದ್ದರು. ಬಹುಶಃ ಅವರು ಅವರ ಸಜ್ಜನಿಕೆಯಿಂದಲೇ ಈ ರೀತಿ ರಾಜಕೀಯದಲ್ಲಿ ನಾಯಕತ್ವವನ್ನು ಬೆಳೆಸಿಕೊಂಡರು ಎಂದು ನಾನು ಹೇಳಬೇಕಾಗುತ್ತದೆ. ಅದೇ ರೀತಿ ಅವರು ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದ್ದರು. ವಿಧಾನ ಪರಿಷತ್ತಿನಲ್ಲಿ ಉಪ ಸಭಾಪತಿಗಳಾಗಿ ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದರು. ಬಹುಶಃ ಅಲ್ಲಿಯ performance ನಿಂದಲೇ ಅವರು ಪ್ರಥಮ ಬಾರಿಗೆ ಲೋಕಸಭಾ ಸದಸ್ಯರಾಗಿ ಆಯ್ಕೆಯಾದಾಗ ಅವತ್ತು ಲೋಕಸಭೆಯಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡುವಂಥ ಜವಾಬ್ದಾರಿ ಅವರ ಮೇಲೆ ಬಂತು. ಅಲ್ಲಿಯೂ ಸಹ ನಾವು ನೋಡಿದ್ದೇವೆ. ಬಹಳ ಉತ್ತಮವಾಗಿ ಸದನವನ್ನು ನಡೆಸಿದ್ದು ಮಲ್ಲಿಕಾರ್ಜುನಯ್ಯನವರ efficiency ಗೆ ಅದೂ ಕಾರಣವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗಾಗಿ, ಅವರು ಬಹಳ ಎತ್ತರಕ್ಕೆ ಹೋದಂಥ ವ್ಯಕ್ತಿ. Gross root level ನಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿ ಯಾವಾಗಲೂ ಕಾರ್ಯಕರ್ತರ ಜೊತೆ ಸರಳವಾಗಿದ್ದು ವ್ಯಕ್ತಿಯಾಗಿದ್ದವರು. ಹೀಗಾಗಿ, ಸರಳ ಸಜ್ಜನಿಕೆಯ ವ್ಯಕ್ತಿಯನ್ನು ಇವತ್ತು ಕಳೆದುಕೊಂಡಿದ್ದೇವೆ. ನಮ್ಮ ಪಕ್ಷಕ್ಕೂ ಹೆಚ್ಚು ನಷ್ಟವಾಗಿದೆ, ನಾಡಿಗೂ ಹೆಚ್ಚಿನ ನಷ್ಟವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಯಾವಾಗಲೂ ಹೋರಾಟದ ಮನೋಭಾವನೆ ಇದ್ದವರು. ತುರ್ತು ಪರಿಸ್ಥಿತಿ ಘೋಷಣೆಯಾದ ಸಂದರ್ಭದಲ್ಲಿ ಆ ತುರ್ತು ಪರಿಸ್ಥಿತಿಯಲ್ಲಿ ಹೋರಾಟ ಮಾಡಿದವರು. ಅವತ್ತು ಸನ್ಮಾನ್ಯ ಲಾಲ್ ಕೃಷ್ಣ ಅಡ್ವಾಣಿಯವರು, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಬೆಂಗಳೂರಿನಲ್ಲಿದ್ದ ಸಂದರ್ಭದಲ್ಲಿ ಅವರನ್ನು arrest ಮಾಡಿ 18 ತಿಂಗಳು ಬೆಂಗಳೂರಿನ ಕಾರಾಗೃಹದಲ್ಲಿ ಇಟ್ಟಂಥ ಸಂದರ್ಭದಲ್ಲಿ ಎಸ್.ಮಲ್ಲಿಕಾರ್ಜುನಯ್ಯನವರನ್ನೂ ಸಹ ಆ ಸಂದರ್ಭದಲ್ಲಿ arrest ಮಾಡಿದ್ದರು. ಸನ್ಮಾನ್ಯ ಲಾಲ್ ಕೃಷ್ಣ ಅಡ್ವಾಣಿಯವರು, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಜೊತೆ ಆ ಕಾರಾಗೃಹದಲ್ಲಿದ್ದ ಪ್ರಮುಖ ವ್ಯಕ್ತಿಗಳಲ್ಲಿ ಮಲ್ಲಿಕಾರ್ಜುನಯ್ಯನವರೂ ಒಬ್ಬರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಈ ರೀತಿ ಹೋರಾಟದ ಮನೋಭಾವನೆ ಮತ್ತು ಸಮಾಜಕ್ಕಾಗಿ ಕೆಲಸ ಮಾಡುವಂಥದ್ದು, ಪಕ್ಷಕ್ಕಾಗಿ ಕೆಲಸ ಮಾಡುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ಅಗಲಿಕೆ ನಮ್ಮೆಲ್ಲರಿಗೂ ಬಹಳಷ್ಟು ದುಃಖ ತಂದಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪ್ರಭಾಕರ ರೆಡ್ಡಿಯವರು ಕನ್ನಡ ಚಳವಳಿಯಲ್ಲಿ ಗುರುತಿಸಿಕೊಂಡಂಥವರು. ಕನ್ನಡ ಸಂಘದ ಸೇವೆ ಮಾಡಿದಂಥವರು ಕನ್ನಡಪರವಾದ ಹೋರಾಟ ಮಾಡಿದಂಥವರು. ಅವರು ಒಂದು ಉಪ ಚುನಾವಣೆಯಲ್ಲಿ ಆರಿಸಿ ಬಂದಿದ್ದರು.

ಶಂಕರಲಿಂಗೇಗೌಡರವರು ನಮ್ಮ ಪಕ್ಷದಿಂದ 4 ಸಲ ಆರಿಸಿ ಬಂದವರಾಗಿದ್ದರು. 1994ರಲ್ಲಿ ಪ್ರಥಮ ಬಾರಿಗೆ ನಾನು ಇಲ್ಲಿ ಆರಿಸಿ ಬಂದಂಥ ಸಂದರ್ಭದಲ್ಲಿ ನನ್ನ ಜೊತೆಯಲ್ಲಿಯೇ ಅವರೂ ಸಹ ಆರಿಸಿ ಬಂದು ಸತತವಾಗಿ 4 ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ಇಲ್ಲಿಯೂ ಸಹ ಅವರು ಹಲವಾರು ಚರ್ಚೆಗಳಲ್ಲಿ ಭಾಗವಹಿಸಿದ್ದನ್ನು ನಾವು ನೋಡಿದ್ದೇವೆ. ರಾಮಾಯಣದ ಬಗ್ಗೆ, ನಮ್ಮ ಸಂಸ್ಕೃತಿ ಬಗ್ಗೆ ಯಾವಾಗಲೂ ಸತತವಾಗಿ ಯಾವುದೇ ಒಂದು ವಿಷಯ ಬಂದಾಗ ಅವರಿಗೆ ವಾಗ್ಮೇಯತೇ ಇತ್ತಲ್ಲ, ಅದರಿಂದ ತಕ್ಷಣವೇ ಹೇಳುವಂಥದ್ದು ಮಾಡುತ್ತಿದ್ದರು. ಕೆಲವು ವಚನಗಳನ್ನು ಹೇಳುತ್ತಿದ್ದರು. ಸಂಸ್ಕೃತ ಪದಗಳನ್ನು ಹೇಳುತ್ತಿದ್ದರು. ಬಹಳ ಆಳವಾಗಿ ಅದರಲ್ಲಿ ಅಧ್ಯಯನ ಮಾಡಿಕೊಂಡು ಅದನ್ನು ಕರಗತ ಮಾಡಿಕೊಂಡು ಹೇಳುವಂಥ ಶೈಲಿ ಏನಿತ್ತು ಬಹುಶಃ ಅದು ಎಲ್ಲರಿಗೂ ಆಕರ್ಷಣೀಯವಾಗಿತ್ತು. ಆ ರೀತಿಯಾಗಿ ಪಾದರಸದಂಥ ವ್ಯಕ್ತಿತ್ವ ಅವರದಿತ್ತು. ಅವರು ಜನಸಾಮಾನ್ಯರಲ್ಲಿ ಒಂದಾಗಿ ಕೆಲಸ ಮಾಡುತ್ತಿದ್ದರು. ನಾನು ಮೈಸೂರಿನಲ್ಲಿ ನೋಡಿದ್ದೇನೆ. ಏಕೆಂದರೆ, ಅವರು ಕೆಳ ಹಂತದ ಸದಸ್ಯರಾಗಿ, ಜನ ಪ್ರತಿನಿಧಿಯಾಗಿ ಅಂದರೆ, ಮೈಸೂರಿನ ನಗರಸಭೆ, ಮಹಾನಗರ ಪಾಲಿಕೆ ಸದಸ್ಯರಾಗಿ ಕೆಲಸ ಮಾಡಿದ್ದರು, ಒಂದು ಸಲ ಮೇಯರ್ ಆಗಿ ಕೆಲಸ ಮಾಡಿದ್ದರು. ಹೀಗಾಗಿ, ಕೆಳಹಂತದ ಆಡಳಿತವನ್ನು ನೋಡಿ ಬಂದವರು. ಹೀಗಾಗಿ ಬಹುಶಃ ಜನಪ್ರಿಯವಾಗಿ 4 ಬಾರಿ ಆಯ್ಕೆಯಾದವರು. ಅಂಥವರನ್ನೂ ಸಹ ಇವತ್ತು ನಾವು ಕೆಳೆದುಕೊಂಡಿದ್ದು ನಮಗೆ ಹೆಚ್ಚಿನ ರೀತಿಯ ನಷ್ಟವಾಗಿದೆ.

ಎ.ಕೃಷ್ಣಪ್ಪನವರು 4 ಬಾರಿ ವರ್ತೂರು ಕ್ಷೇತ್ರದಿಂದ ಆರಿಸಿ ಬಂದಿದ್ದರು. ನಾನು 1994, 1999ರಲ್ಲಿ ನೋಡಿದ್ದೇನೆ. ಅವರು ಇಲ್ಲಿ ಪಶು ಸಂಗೋಪನಾ ಇಲಾಖೆ, ಕಾರ್ಮಿಕ ಇಲಾಖೆಯ ಸಚಿವರಾಗಿ ಕೆಲಸ ಮಾಡಿದ್ದಾರೆ. ಬಹಳ efficient ಆಗಿ ಕೆಲಸ ಮಾಡುತ್ತಿದ್ದರು. ಬಹಳ emotional feelings ಗೆ ಒಳಗಾಗುತ್ತಿದ್ದರು. ಏನಾದರೂ ಯಾವುದಾದರೂ ವಿಷಯದ ಬಗ್ಗೆ ಮಾತನಾಡುವಾಗ ಅವರು ಬೇಗನೆ emotional ಆಗಿಬಿಡುತ್ತಿದ್ದರು. ಹೀಗಾಗಿ, ಆ ರೀತಿಯಾದ ಸಾಕಷ್ಟು ವಾತಾವರಣ ನಿರ್ಮಾಣವಾಗಿತ್ತು. ಹೀಗಾಗಿ, ಆ ರೀತಿಯ emotional ಇಟ್ಟುಕೊಂಡು ತಮ್ಮ ಇಲಾಖೆಯ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡಿದ್ದವರು. ಕಾರ್ಮಿಕರ ಬಗ್ಗೆ ಏಕೆಂದರೆ ಅವರು ಕಾರ್ಮಿಕ ರಂಗದಿಂದ ಬಂದವರು, ಕಾರ್ಮಿಕ ನಾಯಕರಾಗಿ ಕೆಲಸ ಮಾಡಿದವರು ಕಾರ್ಮಿಕರ ವಿಷಯಗಳು ಬಂದಾಗ ದೊಡ್ಡ ಪ್ರಮಾಣದಲ್ಲಿ ಹೆಚ್ಚು ಒತ್ತು ಕೊಟ್ಟು ಮಾತನಾಡುತ್ತಿದ್ದರು. ಅವರು ಹಿಂದುಳಿದ

ವರ್ಗದ ನಾಯಕರಾಗಿ ಬೆಳವಣಿಗೆಯಾಗಿದ್ದವರು, ಹಿಂದುಳಿದ ವರ್ಗದ ಬಗ್ಗೆ ಬಹಳಷ್ಟು ಕಾಳಜಿ ಇದ್ದಂಥವರು.

ಐ.ಎಂ. ಜಯರಾಮಶೆಟ್ಟಿರವರು ಬೈಂದೂರು ಕ್ಷೇತ್ರದಿಂದ ಭಾರತೀಯ ಜನತಾ ಪಾರ್ಟಿಯಿಂದ ಪ್ರಥಮ ಬಾರಿಗೆ 1994ರಲ್ಲಿ ಆರಿಸಿ ಬಂದರು. ಬೈಂದೂರು ಕ್ಷೇತ್ರ ನಮ್ಮದು ಇರಲಿಲ್ಲ. ಅಲ್ಲಿ ಪಕ್ಷದ ಸಂಘಟನೆ ಮಾಡಿಕೊಂಡು ಪಕ್ಷವನ್ನು ಬೆಳವಣಿಗೆ ಮಾಡಿಕೊಂಡು ಪ್ರಥಮ ಬಾರಿಗೆ ಬೈಂದೂರು ಕ್ಷೇತ್ರದಿಂದ ಆರಿಸಿ ಬಂದರು. ಅವರು ಎರಡು ವರ್ಷ ಮಾತ್ರ ಅಂದರೆ 1994 ರಿಂದ 1998ವರೆಗೆ ಇದ್ದರು. ಮುಂದೆ ಲೋಕಸಭಾ ಚುನಾವಣೆ ಬಂದಾಗ ಭಾರತೀಯ ಜನತಾ ಪಾರ್ಟಿ ಅವರಿಗೆ ಉಡುಪಿ ಕ್ಷೇತ್ರದಿಂದ ನೀವು ನಿಲ್ಲಬೇಕೆಂದು ಹೇಳಿದಾಗ ಅವರು ಉಡುಪಿ ಕ್ಷೇತ್ರದಿಂದ ನಿಂತರು. ಅಲ್ಲಿ successful ಆಗಿ ಆರಿಸಿ ಬಂದರು. ಲೋಕಸಭಾ ಸದಸ್ಯರಾಗಿ ಆ ಅನುಭವವೂ ಇತ್ತು. ಇಲ್ಲಿ ವಿಧಾನಸಭಾ ಸದಸ್ಯರಾಗಿ ಆ ಅನುಭವವೂ ಇತ್ತು ಅಂಥ ಜಯರಾಮಶೆಟ್ಟಿರವರು ಹೋರಾಟದ ಮನೋಭಾವನೆ ಇದ್ದಂಥವರು ಮತ್ತು ಉದ್ಯಮಪತಿಗಳೂ ಹೌದು. ಅವರ ಅಗಲಿಕೆಯೂ ಸಹ ಸಮಾಜಕ್ಕೆ ಹೆಚ್ಚು ನಷ್ಟವಾಗಿದೆ. ಅವರು ಶಿಕ್ಷಣ ಸಂಸ್ಥೆಗಳನ್ನೂ ನಡೆಸಿ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದವರಾಗಿದ್ದರು.

ಗೋಪಿನಾಥ ಮುಂಡೆಯವರ ಬಗ್ಗೆ ಹೇಳಬೇಕೆಂದರೆ, ಅತ್ಯಂತ ಜನಪ್ರಿಯ ನಾಯಕ. ಮಹಾರಾಷ್ಟ್ರದಲ್ಲಿ ಇವತ್ತು ಭಾರತೀಯ ಜನತಾ ಪಾರ್ಟಿಯನ್ನು grass root level ನಲ್ಲಿ ಕಟ್ಟಿ ಬೆಳೆಸಿದಂಥ ವ್ಯಕ್ತಿಯಾಗಿದ್ದರು. ಹಿಂದುಳಿದ ಬಂಜಾರ ಸಮಾಜದವರಾಗಿದ್ದರು. ಬಂಜಾರ ಸಮಾಜ ನಮ್ಮಲ್ಲಿ ಎಸ್‌ಸಿ category ಯಲ್ಲಿ ಬರುತ್ತದೆ. ಆದರೆ, ಮಹಾರಾಷ್ಟ್ರದಲ್ಲಿ ಆ ಸಮಾಜ backward ನಲ್ಲಿ ಬರುತ್ತದೆ. ಬಂಜಾರ ಸಮಾಜದಿಂದ ಬಂದಂಥ ವ್ಯಕ್ತಿ ಮತ್ತು ಕೆಳಹಂತದಿಂದ ರಾಜಕಾರಣ ಮಾಡಿಕೊಂಡು ಬಂದ ವ್ಯಕ್ತಿ ಮತ್ತು ತಮ್ಮ ಬೀಡ್ ಜಿಲ್ಲೆ ಏನಿದೆ ಬೀಡ್ ಜಿಲ್ಲೆಯಲ್ಲಿ ಬಹಳಷ್ಟು sugar factories ಮತ್ತು ಉದ್ಯಮಗಳನ್ನು ಸ್ಥಾಪನೆ ಮಾಡಿ ಅಲ್ಲಿಯ ಯುವಕರಿಗೆ ಉದ್ಯೋಗವಕಾಶ ಕೊಟ್ಟು ದೊಡ್ಡ ಪ್ರಮಾಣದಲ್ಲಿ ಬೀಡ್ ಜಿಲ್ಲೆಯನ್ನು ಬೆಳವಣಿಗೆ ಮಾಡಲಿಕ್ಕೂ ಸಹ ಕಾರಣೀಭೂತರಾದವರು ಗೋಪಿನಾಥ ಮುಂಡೆಯವರು. ಅಲ್ಲಿಯ ರಾಜಕಾರಣದಲ್ಲಿ ಜನಸಾಮಾನ್ಯರ ಜೊತೆ ಸಮ್ಮಿಳಿತವಾಗಿ ಬಹಳ popular leader ಆಗಿ ಬೆಳೆದವರು. ಹೀಗಾಗಿ ಆ ಜನಪ್ರಿಯತೆ ಅವರಿಗಿತ್ತು. ಹೀಗಾಗಿ ಭಾರತೀಯ ಜನತಾಪಾರ್ಟಿ ಮತ್ತು ಶಿವಸೇನೆ ಸಮ್ಮಿಶ್ರ ಸರ್ಕಾರ ಬಂದಾಗ ಅವರು ಭಾರತೀಯ ಜನತಾ ಪಾರ್ಟಿಯ ಪರವಾಗಿ ಉಪ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.

ಶ್ರೀ ಜಗದೀಶ್ ಶೆಟ್ಟರ್ : ಉಪ ಮುಖ್ಯಮಂತ್ರಿಯಾಗಿ ಬಹಳ ಉತ್ತಮವಾದ ಕೆಲಸವನ್ನು ಗೋಪಿನಾಥ ಮುಂಡೆಯವರು ಮಾಡಿದರು. ಅವರು ಪ್ರಥಮವಾಗಿ ಲೋಕಸಭಾ ಚುನಾವಣೆಯಲ್ಲಿ

ಆರಿಸಿ ಬಂದರು ನಂತರ ಅವರು ಸನ್ಮಾನ್ಯ ನರೇಂದ್ರ ಮೋದಿಯವರ Cabinet ನಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿ ಆ job ಅನ್ನು ತೆಗೆದುಕೊಂಡಿದ್ದರು. ನಾನು ಕೂಡ ಪ್ರಮಾಣ ವಚನ ಸಮಾರಂಭಕ್ಕೆ ಹೋಗಿದ್ದೆ. ಪ್ರಮಾಣ ವಚನ ಮುಗಿದ ಮೇಲೆ ಅವರ ಮನೆಯಲ್ಲಿ ಅವರು ನನಗೆ ಸಿಕ್ಕಾಗ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದೆ. ಏಕೆಂದರೆ, ಗೋಪಿನಾಥ ಮುಂಡೆಯವರು ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ incharge ಆಗಿ ಸ್ವಲ್ಪ ದಿವಸ ಕೆಲಸ ಮಾಡಿದ್ದರು. ಹೀಗಾಗಿ ನಮ್ಮ ಕರ್ನಾಟಕದ ಬಗ್ಗೆ ಅವರಿಗೆ ಹೆಚ್ಚಿನ ತಿಳುವಳಿಕೆ ಇತ್ತು ಜೊತೆಗೆ ಇಲ್ಲಿನ ನಾಯಕರ ಜೊತೆಗೆ ಉತ್ತಮವಾದ ಸಂಬಂಧವನ್ನಿಟ್ಟುಕೊಂಡಂಥವರು. ನಾವು ಯಾವುದೇ ಸಂದರ್ಭದಲ್ಲಿ ದೆಹಲಿಯಲ್ಲಿ ಭೇಟಿಯಾದಾಗ ಕರ್ನಾಟಕದ ಬಗ್ಗೆ ಯಾವಾಗಲೂ "ಅಲ್ಲಿ ಏನು ನಡೆಯುತ್ತದೆ, ಏನು ಕಥೆ", ಎಂದು ಕೇಳುತ್ತಿದ್ದರು. ಮೊನ್ನೆ ಕೂಡ ಅವರು RDPR Minister ಆಗಿ ಪ್ರಮಾಣ ವಚನ ಸ್ವೀಕರಿಸಿದ ಮೇಲೆ ನಾವು ಹೋಗಿ ಅವರನ್ನು ಭೇಟಿಯಾಗಿ ಅಭಿನಂದನೆಗಳನ್ನು ಸಲ್ಲಿಸಿದಾಗ, ಬಹಳ ಆತ್ಮೀಯವಾಗಿ ಮಾತನಾಡಿದರು. ನಾನು ಅವರಿಗೆ request ಮಾಡಿದೆ. ನೋಡಿ ನೀವು ಈಗ RDPR Minister ಆಗಿದ್ದೀರಿ, ಇದೊಂದು ದೊಡ್ಡ ಇಲಾಖೆ ನಮ್ಮ ಕರ್ನಾಟಕಕ್ಕೂ ಹೆಚ್ಚಿನ ನೆರವು ಕೊಡಬೇಕೆಂದು ಹೇಳಿದಾಗ, ಅದಕ್ಕೆ, ಅವರು, "ಜಗದೀಶ್ ಶೆಟ್ಟರ್‌ರವರೆ, ನೀವು ಯಾವಾಗ ಬೇಕಾದರೂ ಬನ್ನಿ, ಮಹಾರಾಷ್ಟ್ರದವರು ಕರ್ನಾಟಕದವರು ಅಕ್ಕಪಕ್ಕದಲ್ಲಿದ್ದೇವೆ, ಮಹಾರಾಷ್ಟ್ರ ಬೆಳಸಿದ ಹಾಗೆ ನಿಮ್ಮ ಕರ್ನಾಟಕವನ್ನು ಬೆಳೆಸೋಣ, ನಿಮಗೆ ಏನೇನು ಬೇಕು ಎನ್ನುವದನ್ನು ಹೇಳಿ, ಇನ್ನೊಮ್ಮೆ ಬಂದಾಗ discuss ಮಾಡೋಣ" ಎನ್ನುವ ಮಾತನ್ನು ಮಾನ್ಯ ಮುಂಡೆಯವರು ಹೇಳಿದರು. ಆ ರೀತಿಯಾದ ಆತ್ಮೀಯವಾದ ಸಂಬಂಧವನ್ನಿಟ್ಟುಕೊಂಡಿದ್ದರು. ಅವರು ಎಲ್ಲರ ಜೊತೆಯಲ್ಲಿಯೂ ಒಂದು ಆತ್ಮೀಯವಾದ ಸಂಬಂಧವನ್ನಿಟ್ಟುಕೊಂಡಿರತಕ್ಕಂಥ ಒಬ್ಬ ವ್ಯಕ್ತಿ. ಬಹುಶಃ ಮುಂದೆ ಬರುವಂಥ ದಿನಗಳಲ್ಲಿ ಆ ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶವಿದ್ದಂಥ ಒಬ್ಬ ವ್ಯಕ್ತಿ. ಆ ಮಟ್ಟಕ್ಕೆ ಬೆಳದಿರತಕ್ಕಂಥವರು ದಿ.ಗೋಪಿನಾಥ ಮುಂಡೆ. ಹಿಂದುಳಿದ ವರ್ಗದಿಂದ ಬಂದಂಥ ಮುಂಡೆಯವರು ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆದಂಥವರು. ಇವರ ಅಗಲಿಕೆ ಮಹಾರಾಷ್ಟ್ರಕ್ಕಾಗಲಿ, ನಾಡಿಗಾಗಲಿ, ನಮ್ಮ ಪಕ್ಷಕ್ಕೆ ಹೆಚ್ಚಿನ ನಷ್ಟವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬದವರಿಗೆ ದೇವರು ದಯಪಾಲಿಸಲಿ ಎಂದು ನಾನು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ. ಇದರ ಜೊತೆಗೆ ಎಸ್.ಜನಾರ್ಧನ ರೆಡ್ಡಿ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥವರು.

ಸಿ.ಆರ್.ಸಿಂಹರವರು ಒಬ್ಬ ಪ್ರತಿಭಾವಂತ ನಟರು ಜೊತೆಗೆ ರಂಗಭೂಮಿಯಿಂದ ಬಂದಂಥ ವ್ಯಕ್ತಿ. ರಂಗಭೂಮಿಯಿಂದ ಬಂದಂಥವರು ನೈಜ ನಟನೆಗೆ ಹೆಸರುವಾಸಿಯಾದಂಥವರು

ಸಿ.ಆರ್.ಸಿಂಹರವರು. ಇವರು ನಿರ್ದೇಶಕರಾಗಿ ಕೆಲಸ ಮಾಡಿದಂಥವರು, ಇವರ ಹಲವಾರು ಚಲನಚಿತ್ರಗಳು ಮತ್ತು ಇವರು ನಿರ್ದೇಶಿಸಿದ ಹಲವಾರು ಚಲನಚಿತ್ರಗಳು ಬಹಳ ಜನಪ್ರಿಯವಾಗಿದ್ದವು. ಅದರಲ್ಲಿ ಕಲಾತ್ಮಕತೆ ಕಲಾವಿದರ ಜಾಣ್ಮೆ ಇತ್ತು. ಆ ಒಂದು ಪ್ರತಿಭೆ ಸಿ.ಆರ್.ಸಿಂಹರವರಲ್ಲಿತ್ತು. ನಮ್ಮ ಕನ್ನಡ ಚಿತ್ರರಂಗದಲ್ಲಿರುವ ನಟರಾದ ಶ್ರೀನಾಥ್‌ರವರು ಇವರ ಸಹೋದರರು. ಹೀಗಾಗಿ ಇವರದು ಒಂದು ಪ್ರತಿಭಾವಂತರ ಕುಟುಂಬ. ಸಿ.ಆರ್.ಸಿಂಹರವರು ನಮ್ಮ ಕನ್ನಡದ ಪ್ರತಿಭಾವಂತ ನಟ ಅವರ ಅಗಲಿಕೆ ಈ ಒಂದು ರಂಗಭೂಮಿಗೆ ಕನ್ನಡ ಚಲನಚಿತ್ರಕ್ಕೆ ಹೆಚ್ಚಿನ ನಷ್ಟವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಇರಬಹುದು, ಭಾರತೀಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಇರಬಹುದು, ಇನ್ನು ಅನೇಕ ಪುರಸ್ಕಾರಗಳನ್ನು ಅವರು ಹೊಂದಿದ್ದರು.

ಇನ್ನು ಡಾ:ಜಿ.ಎಸ್.ಪರಮಶಿವಯ್ಯ ಇವರ ಬಗ್ಗೆ ಮಾತನಾಡುವುದಾದರೆ, ಪರಮಶಿವಯ್ಯನವರ ಹೆಸರು ಕೇಳಿದ ತಕ್ಷಣ ನೀರಾವರಿ ತಜ್ಞರೆನ್ನುತ್ತಿದ್ದರು. ಇತ್ತೀಚೆಗಂತೂ ನೀರಾವರಿ ಇಲಾಖೆ ಇರಬಹುದು, ನೀರಾವರಿಗೆ ಸಂಬಂಧಪಟ್ಟಂಥ ಯಾವುದೇ ಯೋಜನೆ ಇರಬಹುದು, ಇದರ ಬಗ್ಗೆ ನಾವು ಏನಾದರೂ ಚರ್ಚೆ ಮಾಡುವಾಗ ಪರಮಶಿವಯ್ಯನವರ ವರದಿಯ ಬಗ್ಗೆಯೂ ಅಸೆಂಬ್ಲಿಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಎತ್ತಿನಹೊಳೆ ತುಮಕೂರು ಜಿಲ್ಲೆಗೆ ಕೋಲಾರ ಜಿಲ್ಲೆಗೆ ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆಲ್ಲಾ ಕುಡಿಯುವ ನೀರಿನ ಒಂದು ಯೋಜನೆಯನ್ನು ತಯಾರಿಸಿ ಅದಕ್ಕೆ ಯಾವ ರೀತಿಯಾಗಿ ಅನುಷ್ಠಾನಕ್ಕೆ ತರಬೇಕೆನ್ನುವ ಕಳಕಳಿ ಇದ್ದಂಥ ವ್ಯಕ್ತಿ ಡಾ:ಜಿ.ಎಸ್.ಪರಮಶಿವಯ್ಯನವರು. ಹೀಗಾಗಿ ಎಲ್ಲರೂ ಕೂಡ ಪರಮಶಿವಯ್ಯನವರ ವರದಿ ಅನುಷ್ಠಾನ ಆಗಬೇಕೆಂದು ಹೇಳುತ್ತಿದ್ದರು. ಅಂದರೆ, ಅವರು ನೀರಾವರಿ ವಿಚಾರದಲ್ಲಿ ಅಷ್ಟರಮಟ್ಟಿಗೆ ಪ್ರಸಿದ್ಧರಾಗಿದ್ದರು ಎನ್ನುವ ಮಾತನ್ನು ಹೇಳುತ್ತೇನೆ. ನಾನು RDPR Minister ಇದ್ದಾಗ Revenue Minister ಅವರನ್ನು ನೋಡಿದ್ದೇನೆ. ಬಹಳ ಸಾರಿ ಅವರು ನಮ್ಮ ಮನೆಗೆ ಬರುತ್ತಿದ್ದರು. ನೀರಾವರಿ ವಿಚಾರವಾಗಿ ಇಂಥ ಯೋಜನೆಯನ್ನು ಜಾರಿಗೆ ತನ್ನಿ. ಕುಡಿಯುವ ನೀರಿನ ಯೋಜನೆ ಕೋಲಾರಕ್ಕೆ ಆಗಿಲ್ಲ. ಬೆಂಗಳೂರು ಗ್ರಾಮಾಂತರಕ್ಕೆ ಆಗಿಲ್ಲ, ಚಿಕ್ಕಬಳ್ಳಾಪುರಕ್ಕೆ ಆಗಿಲ್ಲ, ಈ ರೀತಿಯಾಗಿ ಇಲ್ಲಿ ಎಲ್ಲಾ ಕುಡಿಯುವ ನೀರಿನ ಯೋಜನೆ ಮಾಡಲಿಕ್ಕೆ ಸಾಧ್ಯವಿದೆ, ಇಂಥ ಯೋಜನೆ ಜಾರಿಗೆ ತನ್ನಿ ಎಂದು ಬಲಯುತವಾಗಿ ವಾದ ಮಂಡಿಸುತ್ತಿದ್ದರು. ನಾವು ಕರೆಯಲಿ ಬಿಡಲಿ, ಆದರೆ ಸ್ವತಃ 90ರ ಇಳಿ ವಯಸ್ಸಿನಲ್ಲಿ ನಮ್ಮ ಮನೆಗೆ ಬರುತ್ತಿದ್ದರು. ಸ್ವತಃ ಅವರೆ ನಮ್ಮ ಮನೆಗೆ ಬಂದು ನೀವು ಈ ಯೋಜನೆ ಮಾಡಬೇಕು, ನೀವು responsible Minister ಇದ್ದೀರಿ, ನೀರಾವರಿ ಮಂತ್ರಿಯವರಿಗೆ ಹೇಳಿ, RDPR Minister ಯವರಿಗೆ ಹೇಳಿ ಎಂದು ಈ ರೀತಿಯಾಗಿ ಒತ್ತಾಯ ತರುತ್ತಿದ್ದರು. ಯಾವುದೇ ರೀತಿಯ reward ಗಳಿಗೆ ಮತ್ತೊಂದಕ್ಕೆ ಆಸೆಪಡದೆ ನನ್ನ service ತೆಗೆದುಕೊಳ್ಳಿ ನಾನು ಕೆಲಸ ಮಾಡಲಿಕ್ಕೆ ತಯಾರಿದ್ದೇನೆಂಬ ಮಾತನ್ನು

ಅವರು ಹೇಳುತ್ತಿದ್ದರು. ಈ ಹಿಂದೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರಲಿಲ್ಲ. ಇಂಥವರನ್ನು identify ಮಾಡಿ ಪರಮಶಿವಯ್ಯ ಎನ್ನುವ ವ್ಯಕ್ತಿ ಇದ್ದಾರೆ, ಇವರಿಗೆ ಇಲ್ಲಿಯವರೆಗೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿಲ್ಲವೆಂದು ನನಗೆ ಆಶ್ಚರ್ಯವಾಗಿತ್ತು. ಆದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ, ಗೋವಿಂದ ಕಾರಜೋಳರವರಿಗೆ, ಮೊಟ್ಟ ಮೊದಲನೆಯದಾಗಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕೆಂದು ಹೇಳಿದೆ. ಹೀಗಾಗಿ ನಾನು ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಪ್ರಶಸ್ತಿ ಕೊಡುವ ಒಂದು ಗೌರವ ನನಗೆ ಸಿಕ್ಕಿತು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗಾಗಿ ಕುಡಿಯುವ ನೀರಿನ ಬಗ್ಗೆಯಾಗಲಿ, ನೀರಾವರಿ ಬಗ್ಗೆಯಾಗಲಿ, ಹೆಚ್ಚು ಕಾಳಜಿ ಇರುವಂಥ ವ್ಯಕ್ತಿ ಡಾ:ಜಿ.ಎಸ್.ಪರಮಶಿವಯ್ಯನವರು. ನಾನೊಮ್ಮೆ ಧಾರವಾಡಕ್ಕೆ ಅವರನ್ನು ಕರೆಸಿದ್ದೆ. ಅಲ್ಲಿ ಬೆಣ್ಣೆಹಳ್ಳದ ಸಮಸ್ಯೆ ಇತ್ತು, ಆ ಬೆಣ್ಣೆಹಳ್ಳಕ್ಕೆ ಒಂದು committee ಮಾಡಿ ಅದರಲ್ಲಿ ಬೊಮ್ಮಾಯಿರವರು ಇದ್ದರು,

ಅವರ ಅಧ್ಯಕ್ಷತೆಯಲ್ಲಿ ಒಂದು committee ಮಾಡಿ ಆ ಬೆಣ್ಣೆಹಳ್ಳಕ್ಕೂ ಒಂದು ಚೆಕ್ ಡ್ಯಾಂ ಮಾಡಿ ಅದನ್ನು ಕುಡಿಯುವ ನೀರಿಗೆ ಮತ್ತು ನೀರಾವರಿಗೆ ಯಾವ ರೀತಿಯಾಗಿ ಉಪಯೋಗಿಸಬೇಕೆಂದು ಅವರ ಕಡೆಯಿಂದ ಒಂದು ವರದಿ ತರಿಸಿದೆವು. ಆ ವರದಿ ಇವತ್ತಿಗೂ ಇದೆ, ಅದನ್ನು ಅನುಷ್ಠಾನಗೊಳಿಸುವ ಕೆಲಸ ಇಂದು ಆಗಬೇಕಾಗಿದೆ.

ಇನ್ನೂ ಯಶವಂತ ವಿಠೋಬ ಚಿತ್ತಾಲರವರ ಬಗ್ಗೆ ಹೇಳುವುದಾದರೆ, ಇವರು ಯಶವಂತ ಚಿತ್ತಾಲ ಎಂದೇ ಬಹಳ ಪ್ರಸಿದ್ಧರು. ಆಧುನಿಕ ಸಾಹಿತ್ಯದ ಬಗ್ಗೆ ಹೆಚ್ಚು ಅಧ್ಯಯನ ಮಾಡಿದಂಥವರು. ಬಹಳಷ್ಟು ಸಾಹಿತ್ಯವನ್ನು ರಚಿಸಿದಂತವರು ಯಶವಂತ ಚಿತ್ತಾಲರವರು. ಇವರಿಗೂ ಕೂಡ ಸಾಕಷ್ಟು ಪುರಸ್ಕಾರಗಳು ದೊರೆತಿವೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶಿವರಾಮ ಕಾರಂತರ ಪ್ರಶಸ್ತಿ, ಇನ್ನು ಮುಂತಾದ ಹಲವಾರು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು. ಇಂಥವರ ಅಗಲಿಕೆಯಿಂದ ಸಾಹಿತ್ಯರಂಗಕ್ಕೆ ಅಪಾರ ನಷ್ಟವಾಗಿದೆ ಎಂದು ಹೇಳುತ್ತೇನೆ.

ಮಾನ್ಯ ವಿ.ಕೆ.ಮೂರ್ತಿಯವರ ಬಗ್ಗೆ ಹೇಳುವುದಾದರೆ, ಇವರು ನಮ್ಮ ಕರ್ನಾಟಕದವರು ಇವರು ಬೆಂಗಳೂರಿನಲ್ಲಿಯೇ settle ಆದಂಥವರು. ಆದರೆ, ಇವರು ಕರ್ನಾಟಕದವರಾದರೂ ಇಡೀ ಹಿಂದಿ ಚಿತ್ರರಂಗದಲ್ಲಿ ಛಾಯಗ್ರಹಣದಲ್ಲಿ ಬಹಳವಾಗಿ ತಮ್ಮ ಪ್ರತಿಭೆ ತೋರಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದಂಥವರು ವಿ.ಕೆ.ಮೂರ್ತಿ. ದಾದ ಸಾಹೇಬ್ ಫಾಲ್ಕೆ ಎನ್ನುವ ಶ್ರೇಷ್ಟವಾದ ಪ್ರಶಸ್ತಿ ಇವರಿಗೆ ಸಿಕ್ಕಿದೆ ಎಂದರೆ ಅವರ ಪ್ರತಿಭೆ ಎಷ್ಟು ದೊಡ್ಡದು ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಹೀಗಾಗಿ ನಾವು ಒಬ್ಬ ಪ್ರತಿಭಾವಂಥ ಛಾಯಗ್ರಾಹರನ್ನು ಕಳೆದುಕೊಂಡಿದ್ದೇವೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಈ ಎಲ್ಲಾ ಮಹನೀಯರುಗಳ ಅಗಲಿಕೆಯಿಂದಾಗಿ ನಮಗೂ ಹಾಗೂ ಅವರ ಕುಟುಂಬ ವರ್ಗದವರಿಗೂ ದುಃಖ ತಂದಿದೆ. ಇವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ದಯಪಾಲಿಸಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿ, ಸನ್ಮಾನ್ಯ ಅಧ್ಯಕ್ಷರೆ, ತಾವೇನು ಸಂತಾಪ ಸೂಚನೆ ಮಂಡನೆ ಮಾಡಿದ್ದೀರಿ ಅದಕ್ಕೆ ನಾನು ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ (ಕಡೂರು) : ಮಾನ್ಯ ಸಭಾಧ್ಯಕ್ಷರೆ, ಈ ದಿನ ಈ ಸದನದಲ್ಲಿ ಮಂಡಿಸಿರುವಂತಹ 11 ಜನ ಗಣ್ಯರ ಸಂತಾಪ ಸೂಚನೆಯ ಸಂದರ್ಭದಲ್ಲಿ, ಮೊಟ್ಟಮೊದಲಿಗೆ ಈ 11 ಜನರೂ ಕೂಡ ತಮ್ಮದೇ ಆದ ಕ್ಷೇತ್ರಗಳಲ್ಲಿ ಸಾರ್ಥಕವಾದಂತಹ ಬದುಕು ಮತ್ತು ಸಾಧನೆ ಮಾಡಿದಂತಹ ಪುಣ್ಯಾತ್ಮರು, ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರುತ್ತಾ ಈ ಸೂಚನೆಗೆ ನಾನು ನಮ್ಮ ಪಕ್ಷದ ಪರವಾಗಿ ಸಂಪೂರ್ಣವಾದ ಬೆಂಬಲ ನೀಡುವುದರ ಜೊತೆಗೆ ಎಲ್ಲರ ಬಗ್ಗೆಯೂ ಕೂಡ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಂಡಿಸಿರುವಂತಹ ಸೂಚನೆಗೂ ಕೂಡ ಎಲ್ಲಾ ವಿವರಗಳು ಇರುವುದರಿಂದ ಸದನದ ಸಮಯವನ್ನು ನಾವು ಸದುಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಕೆಲವೇ ಕೆಲವು ವ್ಯಕ್ತಿಗಳ ಬಗ್ಗೆ ಕೆಲವೇ ಕೆಲವು ಮಾತುಗಳನ್ನು ಹೇಳುತ್ತೇನೆ. ಆದರೆ ಹನ್ನೊಂದೂ ಜನರ ಸಾರ್ಥಕ ಬದುಕಿನ ಬಗ್ಗೆ ನಮಗೆ ಗೌರವವಿದೆ ಎಂಬುದನ್ನು ನಾನು ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ.

ದಿ.ಎಸ್.ಮಲ್ಲಿಕಾರ್ಜುನಯ್ಯನವರ ಬಗ್ಗೆ ಬಹಳ ಮುಖ್ಯವಾಗಿ ನಾವು ಜ್ಞಾಪಿಸಿಕೊಳ್ಳಬೇಕಾಗಿರುವಂತಹ ಒಂದು ಅಂಶವೆಂದರೆ, ರಾಜಕಾರಣದಲ್ಲಿ ಸಭ್ಯತೆ, ಸರಳತೆ, ಸಜ್ಜನಿಕೆ ಅಪರೂಪವಾಗುತ್ತಿರುವಂತಹ ಸಂದರ್ಭದ ಒಳಗಡೆಯಲ್ಲಿ ಮತ್ತು ಎಲ್ಲೋ ಒಂದು ಕಡೆ ಒಂದು ತತ್ವಕ್ಕೆ ಬದ್ಧವಾದ ರಾಜಕಾರಣವನ್ನು ಮಾಡುತ್ತಿರುವಂಥದ್ದು, ಅಪರೂಪವಾಗುತ್ತಿರುವ ದಿನಗಳಲ್ಲಿ ದಿ॥ ಎಸ್.ಮಲ್ಲಿಕಾರ್ಜುನರವರು ಅಷ್ಟರ ಮಟ್ಟಿಗೆ ಈಗ ನಮಗೆ ಆದರ್ಶರಾಗಿದ್ದಾರೆಂದು ಈ ಸಂದರ್ಭದಲ್ಲಿ ಆ ಒಂದು ಅಂಶವನ್ನು ನಾನು ಸದನದ ಎಲ್ಲರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ದಿ.ಪ್ರಭಾರಕರ ರೆಡ್ಡಿಯವರನ್ನು ಸ್ಮರಿಸಿಕೊಳ್ಳುವ ಸಂದರ್ಭದಲ್ಲಿ ಹೇಳುವುದಾದರೆ, ಅವರನ್ನು ಸ್ಮರಿಸಿಕೊಳ್ಳುವುದರಲ್ಲಿ ಸ್ವಲ್ಪ ಪ್ರಸ್ತುತತೆ ಇದೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಜನಪರ ಹೋರಾಟಗಳು ಎಲ್ಲೋ ಒಂದು ಕಡೆ ಕ್ಷೀಣಿಸುತ್ತಿವೆ. ಹಾಗಾಗಿ ರಾಜಕಾರಣಕ್ಕೆ ಮತ್ತು ಸಾರ್ವಜನಿಕ ಬದುಕಿಗೆ ಹೆಚ್ಚು ಹತ್ತಿರವಾದಂಥದ್ದು ಎಂದರೆ ಜನಪರ ಹೋರಾಟಗಳು. ಅದು ನೆಲ–ಜಲ, ಭಾಷೆಯ ವಿಷಯವಿರಬಹುದು, ಸಾರ್ವಜನಿಕರ ಸಮಸ್ಯೆಗಳಿರಬಹುದು, ರೈತರ ಪರ ಹೋರಾಟಗಳಿರಬಹುದು ಅಂತಹ ಹೋರಾಟಗಳೆಲ್ಲೋ ಮಸುಕಾಗುತ್ತಿವೆ, ಮಂಕಾಗುತ್ತಿವೆ ಎನ್ನುವ ದಿನಗಳಲ್ಲಿ ಅವರು, ಆ ದಿನಗಳಲ್ಲಿ ಅವರು ಶಾಸಕರಾಗಿದ್ದು ಅಲ್ಪಾವಧಿ ಆದರೆ ನಿರಂತರವಾದ

ಹೋರಾಟದೊಳಗೆ ತಮ್ಮನ್ನು ತಾವು ತೊಡಗಿಸಿಕೊಂಡು ಬಂದವರು ದಿ.ಪ್ರಭಾಕರ ರೆಡ್ಡಿಯವರು. ಹಾಗಾಗಿ ದಿ.ಪ್ರಭಾಕರ ರೆಡ್ಡಿಯವರು ಇವತ್ತು ಹೆಚ್ಚು ಪ್ರಸ್ತುತರಾಗುವುದು ಇಂತಹ ಜನಪರ ಹೋರಾಟಗಳ ಜೀವಂತಿಕೆ ಮುಖ್ಯ ಎನ್ನುವ ದೃಷ್ಟಿಯಿಂದ ಮುಖ್ಯರಾಗುತ್ತಾರೆ.

ದಿ.ಶಂಕರಲಿಂಗೇಗೌಡರ ಬಗ್ಗೆ ಈಗಾಗಲೇ ಸಾಕಷ್ಟು ವಿಷಯ ಪ್ರಸ್ತಾಪವಾಗಿದೆ, ಒಳ್ಳೆಯ ವಾಗ್ಮಿಗಳು, ಒಳ್ಳೆಯವರು ಎಂದು ಪ್ರಸ್ತಾಪವಾಗಿದೆ. ಮಾನ್ಯ ಶಂಕರಲಿಂಗೇಗೌಡರಿಗೆ ಮಂತ್ರಿ ಪದವಿ ಸಿಗಲಿಲ್ಲ ಎನ್ನುವಂಥದ್ದರ ಬಗ್ಗೆ ಈಗ ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಪ್ರಸ್ತಾಪ ಇಟ್ಟುಕೊಂಡು, ದಿ.ಕೃಷ್ಣಪ್ಪನವರ ಆತ್ಮಕ್ಕೆ ಶಾಂತಿ ಕೋರುವ ಸಂದರ್ಭದಲ್ಲಿ ದಿ.ಕೃಷ್ಣಪ್ಪವರಿಗೂ ಅವರ ಕೊನೆಯ ದಿನಗಳಲ್ಲಿ ಅಂಥದೇ ಒಂದು ಭಾವನೆ ಬಂದಿತ್ತು. ಅವರು ಸಾಮಾಜಿಕ ನ್ಯಾಯಕ್ಕೆ, ಹಿಂದುಳಿದ ವರ್ಗಕ್ಕೆ ಹೋರಾಟಗಾರರಾಗಿ ಅಷ್ಟೊಂದು ಸಾಮಾಜಿಕ ನ್ಯಾಯಕ್ಕೆ, ಬದ್ಧವಾಗಿರುವಂಥ ಪಕ್ಷ ಎಂದುಕೊಂಡು ಆ ಕಾಂಗ್ರೆಸ್ ಪಕ್ಷದ ಒಳಗಡೆ ಸಚಿವರಾಗಿ, ಶಾಸಕರಾಗಿ, ಸಾಮಾಜಿಕ ನ್ಯಾಯದ ಪರವಾಗಿ, ಹಿಂದುಳಿದ ವರ್ಗದವರ ಪರವಾಗಿ ಹೋರಾಟ ಮಾಡಿಕೊಂಡು ಬಂದವರಿಗೆ ಒಂದು ನಿರೀಕ್ಷೆ ಇತ್ತು.

ಶ್ರೀ ವೈ.ಎಸ್.ವಿ.ದತ್ತ : 2013ನೇ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಏನಾಯಿತ್ತೆಂದರೆ, ಕಾಂಗ್ರೆಸ್ ಪಕ್ಷ ಸಾಮಜಿಕ ನ್ಯಾಯಕ್ಕೆ ಬದ್ಧವಾಗಿರುವುದರಿಂದ, ನನ್ನಂಥ ಒಬ್ಬ ಹಿಂದುಳಿದ ವರ್ಗದವನಿಗೆ ಅಸೆಂಬ್ಲಿ ಟಿಕೆಟ್ ಖಂಡಿತ ಸಿಗುತ್ತದೆ ಎಂದು ಅವರು ಬಹಳ ವಿಶ್ವಾಸ ಹೊಂದಿದ್ದರು. ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುತ್ತೇವೆಂದು ಹೇಳುವ ಕಾಂಗ್ರೆಸ್ ಪಕ್ಷ ಮಾನ್ಯ ಕೃಷ್ಣಪ್ಪನವರಿಗೆ 2013 ವಿಧಾನ ಸಭಾ ಚುನಾವಣೆಗೆ ಕೊನೆಗಳಿಗೆಯಲ್ಲಿ ಟಿಕೆಟ್ ಕೊಡಲಿಲ್ಲ. ಮಾನ್ಯ ಕೃಷ್ಣಪ್ಪನವರು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದ್ದರೂ ಅವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಕೊಡಲಿಲ್ಲ. ಆದರೆ, ಸಾಮಾಜಿಕ ನ್ಯಾಯಕ್ಕೆ ಅಷ್ಟೇ ಗಟ್ಟಿಯಾಗಿರುವ ನಮ್ಮ ಜೆ.ಡಿ.ಎಸ್.ಪಕ್ಷ ಅವರಿಗೆ..

ಶ್ರೀ ಡಿ.ಕೆ.ಶಿವಕುಮಾರ್(ಮಾನ್ಯ ಇಂಧನ ಸಚಿವರು) : ಮಾನ್ಯ ದತ್ತಾರವರೆ, ಇಲ್ಲಿ politics ಬೇಡ. ಇಲ್ಲಿ politics ಏತಕ್ಕೆ ಬೇಕು ?

ಶ್ರೀ ವೈ.ಎಸ್.ವಿ.ದತ್ತ : politics ಮಾಡುತ್ತಿಲ್ಲ. ಈ ಸಂದರ್ಭದಲ್ಲಿ ಆ ವಿಷಯ ಪ್ರಸ್ತುತವಾಗಿದೆ. ಏಕೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಶ್ರೀಯುತ ಶಂಕರಲಿಂಗೇಗೌಡರ ಬಗ್ಗೆ ಹೇಳಿದ್ದ ಪ್ರಯುಕ್ತ ಈ ಒಂದು ಅಂಶವನ್ನು ಸದನದ ಗಮನಕ್ಕೆ ತಂದಿದ್ದೇನೆ. ಅತ್ಯಂತ ಹಿಂದುಳಿದಂಥ ಯಾದವ ಸಮುದಾಯಕ್ಕೆ ಆದ್ಯತೆ ಕೊಡತಕ್ಕಂಥದ್ದು ನಮ್ಮ ಪಕ್ಷದ ಕರ್ತವ್ಯ ಆಗಿದೆ ಎಂದು ಹಾಗೂ ನಮ್ಮ ಪಕ್ಷದ ಒಂದು ಅವಕಾಶ ಎಂದು ಭಾವಿಸಿ ನಾವು ಅವರಿಗೆ ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ

ಅಭ್ಯರ್ಥಿಯಾಗಿ ನಿಲ್ಲಿಸಿದ್ದೆವು. ಶ್ರೀಯುತರು ಅಲ್ಪ ಮತಗಳ ಅಂತರದಲ್ಲಿ ಸೋತರು. ಮತ್ತೆ ನ್ಯಾಯ ಮತ್ತು ಬದ್ಧತೆ ದೃಷ್ಟಿಯಿಂದ ಅವರನ್ನು ನಮ್ಮ ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಮಾಡಿದ್ದೆವು. ಆದ್ದರಿಂದ, ಅವರು ಒಂದು ರಾಜ್ಯ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರೆಂಬ ವಿಷಯ ಈ ಸಂತಾಪ ಸೂಚನೆ ನಿರ್ಣಯದಲ್ಲಿ mention ಮಾಡಬೇಕಾಗಿತ್ತು. ಏಕೆಂದರೆ, ಅವರೊಬ್ಬ ಹಿಂದುಳಿದ ವರ್ಗದವರಾಗಿ, ರಾಜಕೀಯ ಮನ್ನಣೆ ಪಡೆದಂಥ ಒಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಅವರು ಮೃತರಾದರೆಂಬ ವಿಷಯ ಇಲ್ಲಿ mention ಆಗಬೇಕಾಗಿತ್ತೆಂದು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ಶ್ರೀಯುತ ಕೃಷ್ಣಪ್ಪನವರ ನಿಧನ ಒಂದು ರೀತಿಯಲ್ಲಿ ಹಿಂದುಳಿದ ವರ್ಗಗಳ ಹೋರಾಟಕ್ಕೆ ಮಂಕು ಕವಿಸಿದೆ. ಹಾಗೆಯೇ ನಮ್ಮ ಪಕ್ಷಕ್ಕೂ ಕೂಡ ತುಂಬಾ ನಷ್ಟವಾಗಿದೆ. ಎಲ್ಲಕ್ಕಿಂಥ ಮುಖ್ಯವಾಗಿ ಮೊನ್ನೆದಿವಸ ವಿಧಾನ ಪರಿಷತ್‌ಗೆ ಯಾದವ ಸಮುದಾಯಕ್ಕೆ ಸೇರಿದವರೊಬ್ಬರನ್ನು ನಾಮಕರಣ ಮಾಡುವಂಥ ಆಯ್ಕೆಯ ಪ್ರಕ್ರಿಯೆಯಲ್ಲಿ ಎಲ್ಲೊಂದು ಕಡೆ ಶ್ರೀಯುತ ಕೃಷ್ಣಪ್ಪನವರ ಸಾವು ಅದರ ಹಿನ್ನಲೆಯಲ್ಲಿ ಕೆಲಸ ಮಾಡಿದೆ ಎಂದು ನಾನು ಭಾವಿಸುತ್ತಾ ಅವರ ಆತ್ಮಕ್ಕೆ ನಾನು ಶಾಂತಿ ಕೋರುತ್ತೇನೆ. ಮಾನ್ಯ ಐ.ಎಂ.ಜಯರಾಮ ಶೆಟ್ಟಿರವರು, ಮಾನ್ಯ ಗೋಪಿನಾಥ್ ಪಿ.ಮುಂಡೆಯವರು ಹಾಗೂ ಮಾನ್ಯ ಎನ್.ಜನಾರ್ಧನ ರೆಡ್ಡಿರವರ ಎಲ್ಲಾ ವಿಷಯಗಳು ಈಗಾಗಲೇ ಪ್ರಸ್ತಾಪವಾಗಿವೆ. ಶ್ರೀಯುತ ಸಿ.ಆರ್.ಸಿಂಹರವರ ಬಗ್ಗೆ ಹೇಳುವುದಾದರೆ, ಮಾನ್ಯ ಸಿ.ಆರ್.ಸಿಂಹರವರು ಉತ್ತಮ ಕಲಾವಿದರಾಗಿ ರಂಗ ಭೂಮಿ ಮತ್ತು ಚಲನಚಿತ್ರ ರಂಗಗಳಲ್ಲಿ ತಮ್ಮ ಚಾಪು ಮೂಡಿಸಿದ್ದರು. ಇವತ್ತಿನ ದಿವಸ ನಮ್ಮಲ್ಲಿ ಬರ ಹೆಚ್ಚು ಕಾಡುತ್ತಿದೆ. ಬರ ಇರುವಂಥ ಸಂದರ್ಭದಲ್ಲಿ ಬಾಚಿಕೊಳ್ಳುವವರೆ ಜಾಸ್ತಿ. ಅದರಲ್ಲೂ ಬರ ಬಂದರೆ ರಾಜಕಾರಣಿಗಳು ಬಾಚಿಕೊಳ್ಳುವುದಕ್ಕೆ ಕಾಯುತ್ತಿರುತ್ತಾರೆಂದು ಹೊರಗಡೆ ಅಂದರೆ, ಸಾರ್ವಜನಿಕವಾಗಿ ಎಲ್ಲೊಂದು ಕಡೆ ಅನೇಕ ಸಲ ಟೀಕೆ–ಟಿಪ್ಪಣಿಗಳು ಗ್ರಾಸವಾಗುತ್ತವೆ. ಮಾನ್ಯ ಸಿ.ಎಸ್.ಸಿಂಹರವರು ಅಭಿನಯಿಸಿರುವ ಬರ ಎಂಬ ಚಲನಚಿತ್ರ ಇದೆ. ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಎಂ.ಎಸ್.ಸತ್ಯಾರವರು ನಿರ್ದೇಶನ ಮಾಡಿರುವ ಚಿತ್ರ ಇದಾಗಿದೆ. ಮಾನ್ಯ ಅನಂತ್‌ನಾಗ್‌ರವರು ಮತ್ತು ಮಾನ್ಯ ಸಿ.ಆರ್.ಸಿಂಹರವರು ಪ್ರಧಾನ ಭೂಮಿಕೆಯು ಚಿತ್ರವಾಗಿದೆ. ಬರ ಬಂದರೆ ನಮ್ಮಂಥ ರಾಜಕಾರಣಿಗಳು ಹೇಗೆ ಚಿಗಿತುಕೊಳ್ಳುತ್ತೇವೆಂಬುದನ್ನು ಬರ ಎಂಬ ಚಲನಚಿತ್ರದಲ್ಲಿ ತೋರಿಸಿಕೊಟ್ಟಿದ್ದಾರೆ. ಹಾಗೆಯೇ ಅದರಲ್ಲಿ ಅವರು ಅತ್ಯುತ್ತಮವಾದ ಅಭಿನಯ ಮಾಡಿ ಒಂದು ರೀತಿಯಲ್ಲಿ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿದ್ದಂಥ ಕೈಲಾಸಂನವರ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲ.

ಕನ್ನಡಕ್ಕೆ ಒಬ್ಬನೆ ಕೈಲಾಸಂ ಎನ್ನುವ ರೀತಿಯಲ್ಲಿ ಕೈಲಾಸಂನವರನ್ನು ಇವತ್ತಿನ ಯುವ ಪೀಳಿಗೆಗೆ ಪರಿಚಯ ಮಾಡಿಕೊಟ್ಟಂಥ ಮಾನ್ಯ ಸಿ.ಆರ್.ಸಿಂಹರವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಕೊನೆಯದಾಗಿ ಶ್ರೀ ಯಶವಂತ ವಿಠೋಬ ಚಿತ್ತಾಲರವರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರಗಳು ಅನೇಕ ಯೋಜನೆಗಳನ್ನು ತರುತ್ತದೆ. ಒಬ್ಬ ಸಾಹಿತಿ ಹೇಗೆ ಸಾಮಾಜಿಕ ಚಿಂತನೆಯನ್ನು ಮಾಡಬಹುದು ಎಂಬುದಕ್ಕೆ ಶ್ರೀಯುತ ಯಶವಂತ ವಿಠೋಬ ಚಿತ್ತಾಲರವರ ಕಾದಂಬರಿಗಳು ಬಹಳ ಮುಖ್ಯವಾಗಿವೆ. ಏಕೆಂದರೆ, ಈಗ ಹೆಚ್ಚು ಹೆಚ್ಚು urbanization ಕಡೆಗೆ ಹೋಗುತ್ತಿದ್ದೇವೆ. ಕೈಗಾರಿಕಾ ಕ್ರಾಂತಿಯ ನಂತರ ಈಗ ನಗರೀಕರಣದ ಛಾಯೆ ಹಬ್ಬಿಕೊಂಡಿದೆ. ಅದರಿಂದ, ಗ್ರಾಮೀಣ ಪರಿಸರಗಳು ಹೇಗೆ ಹಾಳಾಗುತ್ತಿವೆ ಎಂದು ಮತ್ತು ನಗರೀಕರಣದಿಂದ ನಗರಗಳಲ್ಲಿ ಯಾವ ಸಮಸ್ಯೆಗಳು ಉದ್ಭವಾಗುತ್ತಿವೆ ಎಂದು ಮತ್ತು ಇದರಿಂದ ಎಂಥೆಂಥ ಸಾಮಾಜಿಕ ಪಿಡುಗುಗಳು ಉಂಟಾಗುತ್ತಿವೆ ಎಂಬ ಬಗ್ಗೆ ಕಾದಂಬರಿ ಬರೆದಿದ್ದಾರೆ. ನಗರೀಕರಣದಿಂದ ಆಗುತ್ತಿರುವ ವ್ಯತ್ಯಯಗಳು ಮತ್ತು ಪರಿಣಾಮಗಳ ಬಗ್ಗೆ ಶ್ರೀಯುತ ಯಶವಂತ ವಿಠೋಬ ಚಿತ್ತಾಲರವರು ಕನ್ನಡದ ಕಾದಂಬರಿಗಳನ್ನು ಬರೆದಿದ್ದಾರೆ. ಆದ್ದರಿಂದ, ಶ್ರೀಯುತರು ಬರೆದಿರುವ ಕಾದಂಬರಿಗಳನ್ನು ಸಾಹಿತಿಗಳು ಮತ್ತು ಸಾಹಿತ್ಯಾಸಕ್ತಿ ಉಳ್ಳವರು ಮಾತ್ರ ಓದತಕ್ಕಂಥದಲ್ಲ. ನಮ್ಮಂಥ ಸಾರ್ವಜನಿಕ ಬದುಕಿನ ರಾಜಕಾರಣಿಗಳು ಸಹ ನಗರೀಕರಣದ ಪರಿಣಾಮಗಳ ಬಗ್ಗೆ ತಿಳಿದುಕೊಳ್ಳಬೇಕಾದರೆ, ಮಾನ್ಯ ಯಶವಂತ ವಿಠೋಬ ಚಿತ್ತಾಲರವರ ಕಾದಂಬರಿಗಳನ್ನು ಓದುವುದು ಒಳ್ಳೆಯದೆಂದು ನನಗೆ ಅನಿಸುತ್ತದೆ. ಅಂಥ ಒಬ್ಬ ಒಳ್ಳೆಯ ಕಾದಂಬರಿಗಾರರನ್ನು ಇವತ್ತಿನ ದಿನ ನಾವು ಕಳೆದುಕೊಂಡಿದ್ದೇವೆ. ಒಟ್ಟಿನಲ್ಲಿ ಈ 11 ಜನರು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ನಮಗೆ ಉತ್ತಮವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಹಾಗೆಯೇ, ಸ್ಮರಣೆಗೆ ಅತ್ಯಂತ ಯೋಗ್ಯರಾಗಿರುವಂಥವರಾಗಿದ್ದು, ಇವರೆಲ್ಲರ ಆತ್ಮಕ್ಕೆ ಕೂಡ ನಮ್ಮ ಪಕ್ಷದ ಪರವಾಗಿ ಮತ್ತು ನಮ್ಮೆಲ್ಲ ಮಾನ್ಯ ಶಾಸಕ ಮಿತ್ರರ ಪರವಾಗಿ ನಾನು ಶಾಂತಿ ಕೋರುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಸೂಚಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಲಾಯಿತು)

ಅಧ್ಯಕ್ಷರು : ಸ್ವೀಕೃತವಾದ ಸೂಚನೆಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುತ್ತದೆ. ಈಗ ಪ್ರಶ್ನೋತ್ತರ ವೇಳೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಸಭಾಧ್ಯಕ್ಷರೆ, ನಾವು ನಿಲುವಳಿ ಸೂಚನೆಯ ಬಗ್ಗೆ ಕೊಟ್ಟಿದ್ದೇವೆ. ಕಬ್ಬು ಬೆಳೆಗಾರರಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಬಗ್ಗೆ ಇವತ್ತಿಗೂ ಕೂಡ ಸರ್ಕಾರ ಸ್ಪಂದನೆ ಮಾಡಿಲ್ಲ. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ